**ಓಎಸ್ ನಂಃ 399/2023 ಪಿ.ಡಬ್ಲ್ಯೂ- 1**

**ದಿನಾಂಕಃ 16.06.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ ವಿ.ಆರ್. ವಕೀಲರಿಂದಃ

ನೀವು ಊರಿನಲ್ಲಿ ವಾಸವಿರುತ್ತೀರಿ ಎಂದರೆ ಕಣಿವೆ ಪುರ, ದೊಡ್ಡಬಳ್ಳಾಪುರ ತಾಲ್ಲೂಕು. ದಾವಾ ಆಸ್ತಿ ನಂಬರ್ ಎಷ್ಟು ಎಂದರೆ ನಾನು ಓದಿಲ್ಲ ಎನ್ನುತ್ತಾರೆ. ದಾವಾ ಆಸ್ತಿ ವಿಸ್ತೀರ್ಣ ಏನು ಇರುತ್ತದೆ ಎಂದರೆ 30*40 ಇರುತ್ತದೆ. ದಾವಾ ಆಸ್ತಿ ಚಕ್ಕುಬಂದಿ ಪೂರ್ವಕ್ಕೆ ನಾಗರಾಜು, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಬೀರಪ್ಪ, ದಕ್ಷಿಣಕ್ಕೆ ತಿಪ್ಪಮ್ಮ. ದಾವಾ ಆಸ್ತಿ ಯಾರ ಹೆಸರಿನಲ್ಲಿ ಇರುತ್ತದೆ ಎಂದರೆ ನನ್ನ ಹೆಸರಿನಲ್ಲಿ ಇರುತ್ತದೆ. ದಾವಾ ಆಸ್ತಿ ಮನೆಯಲ್ಲಿ ಯಾರು ವಾಸವಿರುತ್ತಾರೆ ಎಂದರೆ ನಾನೇ ವಾಸವಿರುತ್ತೇನೆ. ದಾವಾ ಆಸ್ತಿ ಕಂದಾಯ ಯಾರು ಕಟ್ಟುತ್ತಾರೆ ಎಂದರೆ ನಾನೇ ಕಟ್ಟುತ್ತೇನೆ. ಕಂದಾಯ ರಸೀದಿ ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೀರಾ ಎಂದರೆ ಕೊಟ್ಟಿಲ್ಲ. ದಾವಾ ಆಸ್ತಿಗೆ ವಿದ್ಯುತ್ ಸಂಪರ್ಕ ಇರುತ್ತದೆಯಾ ಎಂದರೆ ನಾನು ಹಾಕಿಸಿಕೊಂಡಿದ್ದೆ, 3-4 ವರ್ಷದಿಂದ ಪ್ರತಿವಾದಿ ಪಂಚಾಯತಿಯಲ್ಲಿ ಅವರ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ. ವಿದ್ಯುತ್ ಬಿಲ್ ಪ್ರತಿವಾದಿ ಕಟ್ಟುತ್ತಾರೆ ಎಂದರೆ ಈಗ ಅವರೇ ಕಟ್ಟುತ್ತಿದ್ದಾರೆ. ಈಗ ದಾವಾ ಆಸ್ತಿಯಲ್ಲಿ ಪ್ರತಿವಾದಿ ವಾಸವಿರುತ್ತಾರೆ ಎಂದರೆ ನಾನೇ ಇರುತ್ತೇನೆ ಎನ್ನುತ್ತಾರೆ. ದಾವೆಯನ್ನು ಸಲ್ಲಿಸುವಾಗ ನೀವು ಕಣಿವೆ ಪುರದಲ್ಲಿ ಇರುತ್ತನೆ ಎಂದು ಹೇಳಿರುತ್ತೀರಿ ಎಂದರೆ ಇಲ್ಲ ಇಲ್ಲೆ ಇರುತ್ತೆನೆ. 15 ದಿನಗಳಿಗೆ ಒಮ್ಮೆ ಬರುತ್ತೇನೆ. ದಾವಾ ಆಸ್ತಿ ಹೇಗೆ ಬಂದಿರುತ್ತದೆ ಎಂದರೆ ಸರ್ಕಾರದಿಂದ ಬಂದಿರುತ್ತದೆ. ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಿರುತ್ತೀರಿ ಎಂದರೆ ಕೊಟ್ಟಿರುತ್ತೆನೆ. ಪ್ರತಿವಾದಿಗೆ ನೀವು

ಆಸ್ತಿಯನ್ನು ಮಾರಿರುತ್ತೀರಿ ಎಂದರೆ ನಾನು ಮಾರಿಲ್ಲ. ದಾವಾ ಆಸ್ತಿಯನ್ನು ದಿಃ **21.01.1995** ಇಸವಿಯಲ್ಲಿ ಪ್ರತಿವಾದಿಗೆ ಮಾರಾಟ ಮಾಡಿರುತ್ತೀರಿ ಎಂದರೆ ಇಲ್ಲ. ಆ ರೀತಿ ಒಂದು ಕಾಗದ ಬರೆದಿರುತ್ತೀರಿ ಎಂದರೆ ಸುಳ್ಳು,

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮ್ಡಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.